M.G.V.C. Arts, Commerce & Science College MUDDEBIHAL-586212 Dt: Vijayapur

# ಭಕ್ತಿಯ ನೆಲೆಯಲ್ಲಿ ಶರಣರ ಆರ್ಥಿಕ ಚಿಂತನೆಗಳು

ಡಾ. ಬಿ.ಎ.ಗೂಳಿ

ಹನ್ನೆರಡನೆ ಶತಮಾನದ ವೀರಶೈವ ಶರಣರು ಜನತೆಯ ಉಧ್ಧಾರಕ್ಕೆ ಕಾರಣವಾಗುವ ಮಾನವ ಧರ್ಮವನ್ನು ರೂಪಿಸಿ ಅವರನ್ನು ಸತ್ಯ, ನ್ಯಾಯ, ಕಾಯಕ, ದಾಸೋಹ, ಅನುಭವ, ಅನುಭಾವ ಮುಂತಾದವುಗಳ ಮಹತ್ವಗಳನ್ನು ತಿಳಿಸಿದವರು. ಕಾಯಕ ತತ್ವವು ದುಡಿಮೆಗೆ ಗೌರವ ಹಾಗೂ ದೈವತ್ವ ತಂದು ಕೊಟ್ಟಿದ್ದರಿಂದ 'ಕಾಯಕವೇ ಕೈಲಾಸ' ಎಂಬ ವಾಣಿ ಕಲ್ಯಾಣ ಸಾಮ್ರಾಜ್ಯದಲ್ಲಿ ಉದಯವಾಯಿತು. ಕಾಯಕ ಸತ್ಯ ಶುದ್ಧವಾಗಿರಬೇಕು, ಮೋಸ, ವಂಚನೆ, ಹುಸಿ, ಕಪಟ ಇರಬಾರದು. ಸಮಾಜದಲ್ಲಿರುವ ಪ್ರತಿಯೊಬ್ಬರು ಆರ್ಥಿಕವಾಗಿ ಸಧೃಡವಾಗಿ ಶಿವ ಪಂಚಾಯತಗಳಾದ ಅನ್ನ, ಅರಿವೆ, ಆಶ್ರಯ, ಅರಿವು, ಶಿಕ್ಷಣ, ಇವುಗಳನ್ನು ಪಡೆಯಬೇಕಾದರೆ 'ಉದ್ಯೋಗ' ಮಾಡಲೇಬೇಕು. ಅದರಂತೆ ಬಸವಣ್ಣನವರು ವ್ಯಷ್ಟಿ– ಸಮಷ್ಟಿಯ ಕಲ್ಯಾಣಕ್ಕಾಗಿ ತತ್ವ ಸಿದ್ಧಾಂತಗಳನ್ನು ರೂಪಿಸಿದ್ದಕ್ಕೆ ಅವರನ್ನು ಸಹ ಅರ್ಥ ಶಾಸ್ತ್ರಜ್ಞರೆಂದು ಕರೆಯಬಹುದು.

ಜಗತ್ತಿನ ಬಹಳಷ್ಟು ರಾಷ್ಟ್ರಗಳು ಇಂದು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ಒಪ್ಪಿಕೊಂಡಿವೆ ಇಲ್ಲಿ ಸಮಾನತೆ ಎಂಬುವುದು ಮೂಲಭೂತ ಆದರ್ಶ ಆರ್ಥಿಕ ರಂಗಕ್ಕೆ ಈ ಸಮಾನತೆ ತತ್ವವನ್ನು ಅನ್ವಯಿಸಿದರೆ ಪ್ರಜಾಪ್ರಭುತ್ವವನ್ನು ಹೊಂದಿರುವ ಎಲ್ಲ ರಾಷ್ಟ್ರಗಳಲ್ಲೂ ಬಡತನ ಎಂಬುವುದು ಕನಸಿನ ಮಾತು.ಆದರೆ ಇಂದು ಇಲ್ಲಿ ಬಡವರು ಅತಿ ಬಡವರು ಮತ್ತು ಶ್ರೀಮಂತರು,ಅತ್ಯಂತ ಶ್ರೀಮಂತರೆಂಬ ಅತಿ ರೇಖೆಗಳಿರುವುದು ಸೂರ್ಯನಷ್ಟೆ ಸತ್ಯ.

ಅರ್ಥದ ಅಸಮ ಹಂಚಿಕೆಯ ಹಿಂದೆ ಶ್ರಮ ರಹಿತ ಅಡ್ಡದಾರಿಯ ಸಂಪಾದನೆ,ಶೋಷಣೆ,ಭ್ರಷ್ಟಾಚಾರ, ಅಮಿತ ಆಸ್ತಿ ಸಂಗ್ರಹಿಸಿಟ್ಟುಕೊಳ್ಳುವ ದುರಾಸೆ–ಇಂಥ ಕೆಟ್ಟ ಪ್ರವೃತ್ತಿಗಳೇ ಕ್ರಿಯಾಶೀಲವಾಗಿರುವುದು ಎದ್ದು ಕಾಣುತ್ತದೆ. ಮನಸಾಕ್ಷಿಯನ್ನೇ ಮಾರಿಕೊಂಡಿರುವ ಆಧುನಿಕ ಮನುಷ್ಯ "ಉಳಿದವರು ಹಾಳಾಗಿ ಹೋದರೆ ನನಗೇನು? ಎಂಬ ಮನೋಸ್ಥಿತಿಯನ್ನು ಹೊಂದಿದ್ದಾನೆ. ನಮ್ಮ ಸಮಾಜದಲ್ಲಿ ಕೆಲವರು ಆಗರ್ಭ ಶ್ರೀಮಂತರಾರುತ್ತಿದ್ದರೆ ಬಹಳಷ್ಟು ಜನ ಬಡವರಾಗುತ್ತಿದ್ದಾರೆ ಎಂದು ಅರ್ಥ. ಇಂತಹ ಸೂಕ್ಷ್ಮ ಅಂಶಗಳನ್ನು ಅವಲೋಕಿಸುತ್ತಾ ಹೊದಂತೆ ಬಂಡವಾಳ ಶಾಹಿ ವ್ಯವಸ್ಥೆ ಮತ್ತೆ ತನ್ನಅಸ್ಥಿತ್ವವನ್ನು ಸ್ಥಾಪಿಸಿಕೊಳ್ಳುತ್ತಿರುವದ ಸ್ಪಷ್ಟವಾಗುತ್ತಿದೆ. ಇದು ಹೀಗೆಯೇ ಮುಂದುವರೆದರೆ ಒಟ್ಟಾರೆ ಆರ್ಥಿಕ ಸ್ಥಿತಿ ಯಾವ ಗತಿಯನ್ನು ಹೊಂದಬಹುದು? ಎಂಬ ಪ್ರಶ್ನೆ ಕಾಡುತ್ತದೆ. ಇಂತಹ ಪ್ರಶ್ನೆಗಳು ಎದುರಾದಾಗ ಚಿಂತನಶೀಲ ಮನಸ್ಸುಗಳು ತುಡಿಯುವುದು ಹನ್ನೆರಡನೇಯ ಶತಮಾನದ ಶರಣರ ಕಡೆಗೆ ಮತ್ತು ಸರ್ವಸಮಾನತೆಯ ಸಮಾಜವನ್ನು ನಿರ್ಮಿಸಲು ಮಾರ್ಗದರ್ಶಿಯಾಗಬಲ್ಲ ಬದುಕನ್ನು ಬದುಕಿದ ಅವರ ನಡೆ ನುಡಿಗಳು ಇಡೀ ಜಗತ್ತಿನ ಪ್ರಮುಖ ಸಮಸ್ಯಗಳನ್ನು ಪರಿಹರಿಸುವಲ್ಲಿ ಮೂಲ ಪ್ರೇರಣೆಗಳಾಗಬಲ್ಲವು.

ಪ್ರಸ್ತುತ ಸಮಾಜದ ಆರ್ಥಿಕ ವ್ಯವಸ್ಥೆ ಸೂವ್ಯವಸ್ಥಿತವಾಗಿರಲು ಶರಣರು ತೋರಿದ ದಾರಿ ತುಂಬಾ ಅನನ್ಯವಾಗಿದೆ. ಇಂತಹ ದಾರಿಯನ್ನು ಶರಣರು ತಮ್ಮ ಮಾತಿನಲ್ಲಿ ಮಾತ್ರ ತೋರಿಸಲಿಲ್ಲಾ ಬದುಕಿ ಮಾದರಿಯಾದರು. ಈ ಹಿನ್ನಲೇಯಲ್ಲಿಯೇ ಅವರ ಆರ್ಥಿಕ ಸಿದ್ದಾಂತಗಳು ಸರ್ವಕಾಲದ ಅರ್ಥಶಾಸ್ತ್ರಜ್ಞರ ಗಮನ ಸೆಳೆಯುವಂತಿದೆ. ಇಂದಿನ ಆರ್ಥಿಕ ವ್ಯವಸ್ಥೆಯ ಸ್ಥಿತಿಗತಿಗಳನ್ನು ಗಮನಿಸಿದಾಗ ಅದರ ಅವನತ ಮುಖಗಳೇ ಒಡೆದು ಕಾಣುತ್ತಿವೆ. ಇಂತಹ ಅವನತ ಮುಖಗಳಿಗೆ ಸುರೂಪ ಚಿಕಿತ್ಸೆ ಮಾಡಬಲ್ಲ ಶಕ್ತಿ, ಸಾಮರ್ಥ್ಯ ಶರಣರು ನಡೆದ ದಾರಿಯಲ್ಲಿ ಮತ್ತು ನಡಿದ ವಚನಗಳಲ್ಲಿ ಖಂಡಿತವಾಗಿಯೂ ಇದೆ. ಶರಣರ ಪ್ರಮುಖ ಆರ್ಥಿಕ ಚಿಂತನೆಯ ಸಂಕ್ಷಿಪ್ತ ಸಾರ ಈ ರೀತಿಯಾಗಿದೆ.

## ಆರ್ಥಿಕ ಚಿಂತನೆ

ಮಾನವನನ್ನು "ಇಷ್ಟಗಳ ಸೂಡು" ಎಂದು ಕರೆಯಲಾಗುತ್ತದೆ.ಏಕೆಂದರೆ ಅವನ ಇಷ್ಟಗಳು ಅಮಿತ ಅವುಗಳನ್ನು ಸ್ಥೂಲವಾಗಿ ಅಗತ್ಯಗಳು ಮತ್ತು ಅಪೇಕ್ಷೆಗಳೆಂದು ವಿಂಗಡಿಸುತ್ತೇವೆ. ಅಗತ್ಯಗಳು ಕೆಲವಾದರೆ ಅಪೇಕ್ಷೆಗಳು ಹಲವು ಅವುಗಳಿಗೆ ಮಿತಿಯಂಬುವುದಿಲ್ಲ. ಹುಟ್ಟಿನಿಂದ ಮರಣದವರೆಗೂ ಒಂದಿಲ್ಲೊಂದು ಇಷ್ಟವು ಮಾನವನನ್ನು ಪೀಡಿಸುವುದನ್ನು ಅಂಬಿಗ ಚೌಡಯ್ಯನು.



Coordinator, Internal Quality Assurance Ce. M.G.V.C. Arts, Commerce & Science College. MUDDEBIHAL-586212. Dist: Vijayapur.
PRINCIPAL, M.G.V.C. Arts, Com. & Science College MUDDEBIHAL - 586212.

"ಬಡವಂಗೆ ಉಂಬುವ ಚಿಂತೆ:
ಉಣಲಾರದೆ ಉಡುವ ಚಿಂತೆ:
ಇರಲಾರದೆ ಹೆಂಡಿರ ಚಿಂತೆ:
ಮಕ್ಕಳಾದರೆ ಬದುಕಿನ ಚಿಂತೆ:
ಬದುಕಾದರೆ ಕೇಡಿನ ಚಿಂತೆ:
ಕೇಡಾದರೆ ಮರಣದ ಚಿಂತೆ:"
ಎಂದು ಸುಂದರವಾಗಿ ನಿರೂಪಿಸಿದ್ದಾನೆ.

ಅಗತ್ಯಗಳ ತೃಪ್ತಿಯಾದ ಮೇಲೆ ಅಪೇಕ್ಷೆಗಳತ್ತ ಮಾನವನ ಮನ ಹರಿಯಿವದು ಸಹಜ. ಆದರೆ ಅಪೇಕ್ಷೆಗಳ ಬೆನ್ನು ಹತ್ತಿದವನಿಗೆ ತೃಪ್ತಿಯಿಲ್ಲ, ತೃಪ್ತಿಯಿಲ್ಲದಲ್ಲಿ ಶಾಂತಿ ಇಲ್ಲ. ಏಕೆಂದರೆ ಅಪೇಕ್ಷೇಗಳ ಸುಳಿಯಲ್ಲಿ ಸಿಲುಕಿದವನಿಗೆ ತೊಳಲಾಟವಿಲ್ಲದಿಲ್ಲ. ಅಂತೆಯೇ ಮಹಾದೇವಿಯಕ್ಕ "ಮನ ಬಂದುದನ್ನು ಬಯಸಿ ಬೇವುತ್ತಿದ್ದೇನಯ್ಯ" ಎಂದು ನುಡಿದಿದ್ದಾಳೆ.

**ಕಾಯಕ:**

ಸಂಪತ್ತಿನ ಉತ್ಪಾದನೆಯಾಗದೇ ಮಾನವನ ಇಷ್ಟಗಳನ್ನು ಈಡೇರಿಸುವುದು ಅಸಾಧ್ಯ ಶ್ರಮವಿಲ್ಲದೆ ಉತ್ಪಾದನೆ ಇಲ್ಲ. ನಿರತವಾದ ಮಾನವ ಪರಿಶ್ರಮ ಅಥವಾ ಮಾನವ ಚಟುವಟಿಕೆಗೆ ಶ್ರಮ ಎನ್ನಲಾಗುತ್ತದೆ.ಶ್ರಮವನ್ನು ಬಳಸಿಕೊಂಡು ವಸ್ತು ಮತ್ತು ಸೇವೆಗಳ ಉತ್ಪಾದನೆ ಮಾಡುವ ಚಟುವಟಿಕೆಗಳು ದೇಶದ ಆರ್ಥಿಕ ಚಟುವಟಿಕೆಗಳು ಹೆಚ್ಚಿದಂತೆ ಸಂಪತ್ತಿನ ಉತ್ಪಾದನೆ ಹೆಚ್ಚುತ್ತಿದೆ. ಆರ್ಥಿಕ ಚಟುವಟಿಕೆ ಕುಗ್ಗಿದರೆ ಉತ್ಪಾದನೆ ಕುಗ್ಗುತ್ತದೆ. "ಕಾಯಕ" ಎಂಬ ಅನನ್ಯ ಶಬ್ದ ಸಾಮಾಜಿಕ ಹಾಗೂ ಸಾಹಿತ್ಯಕ ಸಂದರ್ಭದಲ್ಲಿ ಮೊಟ್ಟಮೊದಲು ಬಳಕೆಯಾದದ್ದು ಶರಣರ ಕಾಲದಲ್ಲಿ. ಅದಕ್ಕೂ ಮೊದಲಿನ ನಮ್ಮ ಪರಂಪರೆಯಲ್ಲೂ ಪ್ರಚರಿತವಿದ್ದದ್ದು 'ಕರ್ಮ' ಎಂಬ ಶಬ್ದ 'ಕಾಯಕ' ಎಂಬುದು ಆರ್ಥಿಕ ವಿಕಾಸದ ಮೂಲಕ್ರಿಯೆ.

'ಕಾಯಕ' ವೆಂದರೆ 'ಕಾಯ' ಅಥವಾ ಶ್ರಮ 'ಶರೀರ ಶ್ರಮ'ವೆಂಬ ಅರ್ಥ ಸಾಮಾನ್ಯವಾಗಿ ಗೋಚರವಾಗುತ್ತೆದೆ. ಆದರೆ ಶರಣರು ಅದನ್ನು ಶರೀರದ ಶ್ರಮ ಮಾತ್ರವಲ್ಲದೇ ಮನದ ಶ್ರಮ ಕೂಡಾ ಎಂದು ಪರಿಗಣಿಸಿದ್ದಾರೆ ಅಂದರೆ ಮನಸ್ಸು ಒಪ್ಪಿದ ಶರೀರ ಕ್ರಿಯೇ ಅದು ಕಾಯ ವಾಚಾ ಮನಸಾ ನಡೆಯುವ ಕ್ರಿಯೇಯೇ. ಶುದ್ದ ಕಾಯಕ ಬಹಿರಂಗ ಮತ್ತು ಅಂತರಂಗ ಕ್ರಿಯೆಂದ ಕಾಯಕ. ಈ ಬಗೆಯ 'ಕಾಯಕದೊಳಗೆ ಮೂರರ ಕೂಟ'ಎನ್ನುವ ನುಲಿಯ ಚಂದಯ್ಯನ ನುಡಿಯಲ್ಲಿ ದೇಹ,ಮನ,ಭಾವಗಳ ಕೂಟವೆಂದರ್ಥ. ದೇಹ,ಮನ ಭಾವಗಳ ಕ್ರಿಯೆ ಸಮರಸವಾಗಿ ನಿಂದುದೇ ಕಾಯಕ ತ್ರಿಕರಣ ಶುದ್ದಿಯಿಂದ ಮಾಡಿದ ಕ್ರಿಯೆಯೇ ಕಾಯಕ ಅದುವೇ ಕೈಲಾಸ.

ಕೃಷಿ ಕೃತ್ಯ ಆವ ಕಾಯಕದಿಂದಾದೊಡೇನು?
ತನುಮನ ಬಳಸಿ ಗಳಿಸಿ
ಗುರುಲಿಂಗ ಜಂಗಮಕ್ಕೆ ಮೆಚ್ಚಿಸಿ ದಾಸೋಹವ ಮಾಡುವ
ಪರಮ ಭಕ್ತನ ಪಾದವ ತೋರಯ್ಯಾ ಎನಗೆ.

ಎಂದೆನ್ನುವ ಚನ್ನಬಸವಣ್ಣನ, ವ್ಯಕ್ತಿಯ ತನು ಮತ್ತು ಮನ ಎರಡೂ ಬಳಲಿದಾಗ ಮಾತ್ರ ನಿಜವಾದ ಕಾಯಕ ನಡೆಯುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ವೃತ್ತಿ ಪ್ರಾಮಾಣಿಕತೆ, ಶರಣರ ಕಾಯಕದ ಪರಿಕಲ್ಪನೆಯ ಮೊದಲು ಹಾಗೂ ಮೂಲಭೂತ ಅಂಶ,ಮೋಸ,ಭ್ರಷ್ಟ, ಅಪ್ರಾಮಾಣಿಕತೆ ಇಲ್ಲಿ ಸಾಧ್ಯವೇ ಇಲ್ಲ. ಇಷ್ಟೊಂದು ಅರುವಿನ ಕಿಯೆಯಾದ ಕಾಯಕ ಸ್ವಸ್ಥ ಸಮಾಜವನ್ನು ಮತ್ತು ಸ್ವಸ್ಥ ಸಮಾಜದಲ್ಲಿ ಶುದ್ಧ ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಲು ಸಾಧ್ಯ. ಪ್ರಸ್ತುತದಲ್ಲಿನ ವಿದ್ಯಮಾನಗಳನ್ನು ಹೋಲಿಸಿ ನೊಡುವುದಾದರೆ ಎಡವಟಾಗಿರುವುದು ಎದ್ದು ಕಾಣುತ್ತದೆ.ಇಂದು ಕಾಯ ಬಳಲಿಸದೆ ಆದಾಯ ತರುವ ಹಲವಾರು ಅನೈತಿಕ ದಾರಿಗಳು ಚಾಲ್ತಿಯಲ್ಲಿರುವುದು ಸ್ಪಷ್ಟಗೋಚರವಾಗುತ್ತೆದೆ. ಸೀಮಿತ ಆದಾಯ ಪಡೆಯುವವರು ತಮ್ಮ ಕುಟುಂಬದ ಖರ್ಚನ್ನೆಲ್ಲಾ ನಿಭಾಯಿಸಿ ನಾಲ್ಕಾರು ವರ್ಷಗಳಲ್ಲಿ ಕೋಟಿಗಳ ಒಡೆಯನಾಗುವುದು 'ಚಿತ್ತ ಶುದ್ದ ಕಾಯಕ'ದಿಂದ ಸಾಧ್ಯವೇ? ವೃತ್ತಿಯಲ್ಲಿ ಪ್ರಾಮಾಣಿಕತೆ ತಪ್ಪಿ ಅನೈತಿಕ ಹಾಗೂ ಭ್ರಷ್ಟ ಮಾರ್ಗ ಹಿಡಿದಾಗ ಮಾತ್ರ ಇದು ಸಾಧ್ಯ. ಕಡಿಮೆ ದುಡಿತ ಮಾಡಿ ಹೆಚ್ಚು ಆದಾಯವನ್ನು ನರೀಕ್ಷಿಸುವುದು ಕಾಯಕವಲ್ಲ 'ಸಾಮರ್ಥ್ಯಕ್ಕೆ ತಕ್ಕ ದುಡಿತ' ದುಡಿಮೆಗೆ ತಕ್ಕ ಆದಾಯ'ಎಂಬ ಶಿದ್ಧಾಂತದ ಮೂಲ ಬೇರುಗಳು ಆಯ್ದಕ್ಕಿ ಮಾರಯ್ಯನ ವಚನಗಳಲ್ಲೂ ಇರುವುದು ಗಮನಾರ್ಹ. ಕಾಯಕ ಸರ್ವಶ್ರೇಷ್ಠ ಆರ್ಥಿಕ ತತ್ವವೆಂದು ಸಾರಿದ ಶರಣರು ಕಾಯಕದಲ್ಲಿ ತೊಡಗಿದಾಗ ಇನ್ನೇನು ನಡೆದರೂ ಗಮನಿಸಬೇಕಾದ ಅಗತ್ಯವಿಲ್ಲವೆಂಬ ಕಟ್ಟಳೆಯನ್ನು ಹಾಕುತ್ತಾರೆ.

ಕಾಯಕದಲ್ಲಿ ನಿರತನಾದರೆ
ಗುರುದರುಶನವಾದಡೂ ಮರೆಯಬೇಕು:
ಲಿಂಗಪೂಜೆಯಾದಡೂ ಮರೇಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂವಾಯಿತ್ತಾದಡೂ ಕಾಯಕದೊಳಗು–

ಕಾರ್ಯನಿರತರಾಗಿದ್ದಾಗ ಎಲ್ಲವನ್ನೂ ಮರೆಯಬೇಕೆಂಬ ಶರಣರ ಮಾತುಕಾಯಕಕ್ಕೆ ಅತ್ಯುನ್ನತ ಸ್ಥಾನ ಕಲ್ಪಿಸಿದೆ.ಯಾವಾಗ ನಿರ್ಮಿತ ವಸ್ತುಗಳು ಹಣದಿಂದ ಅಳೆಯಲ್ಪಡುತ್ತವೆಯೋ ಆಗಲೇ ವೃತ್ತಿಯಲ್ಲಿನ ಘನತೆ,ಪ್ರಾಮಾಣಿಕತೆಗಳು ನೆಲಕಚ್ಚುತ್ತಿವೆ. ಕಾಯಕ ಜೀವಿಯ ಶ್ರಮ ಗೌಣವಾಗಿ ಆತ ಉತ್ಪಾದಿಸುವ ವಸ್ತುಗಳಿಗೇ ಬೆಲೆ ಬರುತ್ತಿದೆ. ಆರ್ಥಿಕ ವ್ಯವಸ್ಥೆ ಏರುಪೇರಾಗುತ್ತಿದೆ ಬಂಡವಾಳ ಶಾಹಿಗೆ ದಾರಿ ಮಾಡಿಕೊಡುತ್ತದೆ.

**ಸ್ವಾರ್ಜಿತ ಕಾಯಕ–ನಿರುದ್ಯೋಗ:**

ಶರಣರ ಆರ್ಥಿಕ ಚಿಂತನೆಯು ನಿರುದ್ಯೋಗ ಸಮಸ್ಯಯನ್ನು ಹೇಗೆ ಪರಿಹರಿಸಬಹುದೆಂಬ ವಿಚಾರಗಳನ್ನು ಒಳಗೊಂಡಿದೆ.ವ್ಯಕ್ತಿಯು ಕಾಯಕಕ್ಕೆ ಪರರನ್ನೇ ಅವಲಂಭಿಸಬೇಕಾಗಿಲ್ಲ.ಸ್ವಂತವಾಗಿಯೂ ಕಾಯಕವನ್ನು ಕಲ್ಪಿಸಿಕೊಳ್ಳುವವನಾಗಬೇಕು.ಇದು ಶರಣ ತತ್ವ.ಸ್ವಾರ್ಜಿತ ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ವನ್ನು ಕೊಟ್ಟಿದ್ದಾರೆ. ಶರಣರು ಸ್ವಕಾಯಕವನ್ನು ಕುರಿತು–

" ಆವ ಸ್ವಕಾಯಕದಿಂದಾವದು ಆಗಲಿ
ಭಾವ ಶುದ್ಧವಾಗಿ ಮಾಡುವದು ಜಂಗಮಪೂಜೆ"
–ಡಕ್ಕೆಯಬೊಮ್ಮಣ್ಣ

"ವ್ರತಸ್ಥನಾಗಿ ಭವಿಗಳ ಕೆಳಗೆ
ಬೊಕ್ಕಸ ಭಂಡಾರ ಅಸಿಕೃಷಿ ವಾಣಿಜ್ಯ ಮುಂತಾದ
ಕಾಯಕವ ಬಿಟ್ಟು ತನ್ನ ಸ್ವ–ಕಾಯದಿಂದ ಬಂದು ಒದಗಿದ ದ್ರವ್ಯವ........
–ಏಲೇಶ್ವರದ ಕೇತಯ್ಯ

ಎಂದು ನುಡಿದಿದ್ದಾರೆ. 'ಭವಿಗಳ ಕೆಳಗೆ' ಎನ್ನುವಲ್ಲಿ' ವಾಮಮಾರ್ಗದಿಂದ ಅರ್ಥ ಸಂಪಾದನೆ ಮಾಡುವವರು ಎಂದರ್ಥ.

ಸ್ವಾರ್ಜಿತ ಕಾಯಕಕ್ಕೆ ಪೂರಕವೆಂಬಂತೆ, ಶರಣರು ಶ್ರಮಬಾಹುಳ್ಯ ಉದ್ಯಮಗಳಾದ ಗುಡಿಕೈಗಾರಿಕೆ ಹಾಗೂ ಹಳ್ಳಿಯ ಕಸಬುಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಶರಣರ ಕಾಯಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅವರು ಶ್ರಮಬಾಹುಳ್ಯ ಉದ್ಯಮಗಳಿಗೇ ಹೆಚ್ಚಿನ ಲಕ್ಷಕೊಟ್ಟಿರುವುದನ್ನು ನಾವು ಕಾಣಬಹುದು. ಗಾಲಜ ಬೊಮ್ಮಯ್ಯ ಮೊದಲಾದ ಶರಣರು ಕಚ್ಚಾ ವಸ್ತುಗಳು ದೊರೆಯುವ ಸ್ಥಳದಲ್ಲಿ ಕಾರ್ಯಗಾರಗಳನ್ನು ಸ್ಥಾಪಿಸಿ ಅವುಗಳಲ್ಲಿ ಜನರಿಗೆ ಕೈಗಾರಿಕೆಯ ಶಿಕ್ಷಣ ನೀಡಿ ಸಂಪದ ಭ್ಯುದಯಕ್ಕೆ ಕಾರಣೀಭೂತರಾದರು. ಶ್ರಮಬಾಹುಳ್ಯ ಉದ್ಯಮಗಳಿಗೆ ಆದ್ಯತೆ ಕಲ್ಪಿಸಿದ್ದರು. ಜರ್ಮನ್ ವಿದ್ವಾಂಶ ಶ್ಯೂಮ್ಯಾಷರ್ ಮಂಡಿಸಿದ ಆರ್ಥಿಕ ವಿಚಾರಗಳು ಶರಣರ ವಿಚಾರಗಳನ್ನೇ ಪುಷ್ಠೀಕರಿಸುತ್ತವೆ.

**ಕಾಯಕ–ವರ್ಗ ಕಲಹ**

ಹನ್ನೇರಡನೇ ಶತಮಾನದ ಶರಣರು ಎಲ್ಲ ದೋಷಗಳಿಂದ ಮುಕ್ತವಾದ, ಸಮೃದ್ಧಿ ಮತ್ತು ಶಾಂತಿಯನ್ನು ಬಯಸಿದರು. ಅದನ್ನು ನಾವು ಇಂದು ಶರಣವಾದ ಎಂದು ಕರೆದರೆ ತಪ್ಪಾಗಲಾರದು. ಶರಣವಾದದಲ್ಲಿ ಬಂಡವಾಳಶಾಹಿ ಪದ್ದತಿಯ ಆರ್ಥಿಕ ಸಮತೆಯ ಲಕ್ಷಣಗಳನ್ನು ಕಾಣುತ್ತವೆ.

ಭೌತಿಕವಾದದ ತಳಹದಿಯಾಗಿ ಆರ್ಥಿಕಾಭಿವೃದ್ಧಿ ಮತ್ತು ಆರ್ಥಿಕ ಸಮತೇಗಳಷ್ಟೇ ಗುರಿಯಾಗಿರುವ ಮಾರ್ಕ್ಸವಾದದ ಪರಿಯಂತಲ್ಲ ಶರಣವಾದ ಆದ್ಯಾತ್ಮವೇ ತಳಹದಿಯಾಗಿ, ಆರ್ಥಿಕ ಅಭ್ಯುಯದೊಂದಿಗೆ ಆರ್ಥಿಕ ಸಮತೆ,ಶಾಂತಿ ಹಾಗೂ ಆತ್ಮ ವಿಕಸನಗಳು ಗುರಿಯಾಗಿರುವ ವಾದ ಶರಣವಾದ.

ಶರಣವಾದದಲ್ಲಿ ವರ್ಗಕಲಹಕ್ಕೆ ಅಸ್ಪದವಿಲ್ಲ ಯಾವುದೇ ಕಾಯಕವನ್ನು ಕೈಗೊಂಡರು, ಶಿವ–ಜೀವ ಸಾಮರಸ್ಯವನ್ನು ಸಾಧಿಸುವುದು.ಜೀವಿಯ ಪರಮಗುರಿ ಶರಣರ ದೃಷ್ಟಿಯಲ್ಲಿ ಈ ಭಾವದಿಂದ ಎಲ್ಲರೂ ಕಾರ್ಯಾಶೀಲರಾದಾಗ, ಒಡೆಯ–ಕೂಲಿಕಾರ ಎಂಬ ಭಾವನೆ ತಲೆದೋರದು ಉದ್ಯಮಗಳಲ್ಲಿ ಅವರವರ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಅವರವರು ಅಪೇಕ್ಷಿಸಿದಾಗ

M.G.V. Arts, Commerce & Science College MUDDEBIHAL -586212

ಶೋಷಣೆಎಂಬುದಿಲ್ಲ. ಹೀಗಾಗಿ ವರ್ಗಕುಲವೆಂಬುದಿಲ್ಲ. ಶರಣರು ಪ್ರತಿಪಾದಿಸಿದ ಕಾಯಕ ತತ್ವ ಅನುಸಸಿದರೆ ಬಂಡವಾಳಶಾಹಿ ಪದ್ಧತಿಯಲ್ಲಿ ಕಂಡು ಬರುವ ವರ್ಗಕಲಹವನ್ನು ನಿವಾರಿಸಬಹುದು.

**ಆರ್ಥಿಕ ಕಾರ್ಯದಕ್ಷತೆ: (ಕ್ಷಮತೆ)**

ದೇಶದಲ್ಲಿ ಲಭ್ಯವಿರುವ ಉತ್ಪಾದನಾ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯನ್ನು ಆರ್ಥಿಕ ಕಾರ್ಯದಕ್ಷತೆ ಎಂದು ಕರೆಯುತ್ತೇವೆ ಒಂದು ನಿರ್ಧಿಷ್ಟ ಅವಧಿಯಲ್ಲಿ ದೊರೆಯುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸಂಪತ್ತಿನ ಗರಿಷ್ಟ ಉತ್ಪಾದನೆಯಾದರೆ ಆರ್ಥಿಕ ಕಾರ್ಯದಕ್ಷತೆ ಮಹತ್ತರವಾಗಿದೆಯೆಂದು ತಿಳಿಯುತ್ತೇವೆ. ತಮ್ಮ ವಚನಗಳಲ್ಲಿ ನೇರವಾಗಿ ಈ ವಿಷಯ ಕುರಿತು ಶರಣರುವಿವೇಚಿಸಿದಿದ್ದರೂ, ಅವರು ಕಾಯಕ ತತ್ವದ ಪ್ರತಿಪಾದನೆಯಲ್ಲಿ ಕಾರ್ಯದಕ್ಷತೆಯ ಅಂಶವನ್ನು ನಾವು ಕಾಣುತ್ತೇವೆ.

- ಕಾಯಕಸ್ವಾತಂತ್ರ್ಯ (ದೈಹಿಕ,ಮಾನಸಿಕ,ಭಾವಿಕ ಒಲಗಳಗನುಗುಣವಾಗಿ)
- ಕಾಯಕದಲ್ಲಿ ಸತ್ಯತೆ,ಶುದ್ದತೆ ಹಾಗೂ ಪ್ರಾಮಾಣಿಕತೆ
- ಸಂಪನ್ಮೂಲಗಳ ಯುಕ್ತ ಬಳಕೆ
- ಕಾಯಕಕ್ಕೆ ತಕ್ಕ ಪ್ರತಿಫಲ

" ಅಸಿಯಾಗಲಿ,ಮಸಿಯಾಗಲಿ,ಕೃಷಿಯಾಗಲಿ
ವಾಣಿಜ್ಯ ಮುಂತಾದ ಕೃಷಿ ಮಾಡುವಲ್ಲಿ
ಪಶುಪತಿಗೆಂದೇ ಪ್ರಮಾಣಿಸಿ"
ಕಾಯಕವನ್ನು ದೇಹ ಪೂಜೆಯೆಂದು ಭಾವಿಸಬೇಕು
ಮೋಳಿಗೆ ಮಾರಯ್ಯ ಪ್ರಾಮಾಣಿಕ ಕಾಯಕದಲ್ಲಿ ಪರಶಿವ.

**ಸಮಯಪ್ರಜ್ಞೆ:-**

ಕಾಯಕದಲ್ಲಿ ನಿರತನಾದರೆ,
ಗುರುದರುಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು।
ಅಯ್ದಕ್ಕೆ ಮಾರಯ್ಯ

ಸಂಪತ್ತಿನ ಉತ್ಪಾದನೆಗೆ ಸಂಪನ್ಮೂಲಗಳ ಬಳಕೆ ಅವಶ್ಯಕ ಇವುಗಳಲ್ಲದೇ ಸಂಪತ್ತಿನ ಉತ್ಪಾದನೆಯೆಂದು ಕನಸಿನ ಕಗ್ಗಂಟು ಎಂದು ಶರಣರು ಭಾವಿಸುತ್ತಾರೆ. ಅರ್ಥಶಾಸ್ತ್ರಜ್ಞರು ಅವನ್ನೇ ಪ್ರಕೃತಿದತ್ತವೆಂದು ಅಭಿಪ್ರಾಯಪಡುತ್ತಾರೆ. ಆರ್ಥಿಕ ಕಾರ್ಯ ಕ್ಷಮತೆಯ ಕಾಯಕಕ್ಕೆ ತಕ್ಕ ಪ್ರತಿಫಲವನ್ನು ಅವಲಂಭಿಸಿದೆ. ಅವರವರ ಕಾಯಕಕ್ಕೆ ತಕ್ಕ ಪ್ರತಿಫಲ ಅವರಿಗೆ ಸಿಗಬೇಕು ಎಂದು ಹೇಳಿದ್ದಾರೆ.

**ನ್ಯಾಯಬೆಲೆ**

ಉತ್ಪಾದನಾಂಗಗಳಿಗೆ ಹಾಗೂ ಉತ್ಪಾದಿತ ಶಿದ್ಧ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ನ್ಯಾಯವಾದ ಬೆಲೆಸಿಗಬೇಕೆಂಬುದು ಇಂದಿನ ಅರ್ಥಶಾಸ್ತ್ರಜ್ಞರ ಅಭಿಪ್ರಾಯ ಈ ವಿಚಾರದ ಸುಳುಹನ್ನು ಬಸವಣ್ಣನ ಕೆಳಗಿನ ನುಡಿಯಲ್ಲಿ ಕಾಣಬಹುದು.

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಾಹಾದೇವ ಶೆಟ್ಟಿ
ಕಾಣಿಯ ಸೋಲ, ಅರ್ಧಗಾಣಿಯಗೆಲ್ಲ,
ಜಾಣ ನೋಡವ್ವ ನಮ್ಮ ಕೂಡಲಸಂಗಮದೇವಾ"
--ಬಸವಣ್ಣ

© 2020 IJCRT | Volume 8, Issue 6 June 2020 | ISSN: 2320-2882

ಜಗತ್ತಿನ ಮಾರುಕಟ್ಟೆಯ ಒಡೆಯನಾದ ಮಹಾದೇವನು ಉಚ್ಚಮಟ್ಟದ ಶೆಟ್ಟಿಯಂತೆ ಅರ್ಧಕಾಣಿಯನ್ನು ಹೆಚ್ಚಿಗೆ ಅಪೇಕ್ಷಿಸುವುದಿಲ್ಲ. ಅರ್ಧಕಾಣಿಯನ್ನು ಸುಮ್ಮನೆ ಬಿಡಲೂ ಒಪ್ಪುವುದಿಲ್ಲ. ಈ ಜಾಣ್ಮೆಯ ವ್ಯಾಪಾರ ಲೋಕಹಿತ ಸಾಧಿಸುತ್ತದೆ.

ಬಸವಣ್ಣನ ಈ ನುಡಿಯಲ್ಲಿ ಇಂದಿನ ಅಂಚಿನ ಸೀಮಾಂತ ಶಿದ್ದಾಂತದ ಸುಳಿವನ್ನು ಕಾಣುತ್ತವೆ. ಒಟ್ಟಿನಲ್ಲಿ ನಮ್ಮ ಆರ್ಥಿಕ ವ್ಯವಹಾರವು ನೀತಿಯ ನೆಲೆಗಟ್ಟಿನ ಮೇಲೆ ನಡೆಯಬೇಕೆಂಬುದು ಶರಣರ ಅಭಿಪ್ರಾಯವಾಗಿತ್ತು.

ಇದನ್ನೇ ಪ್ರತಿಪಾದಿಸಿದ ಮಾರ್ಷಲ್ "Economics, should be the hand maid of ethics" ಎಂದಿದ್ದಾರೆ.

Dr.V.K.R.V. Rao ಅವರೂ ಇದೇ ಅಭಿಪ್ರಾಯವನ್ನು ಮಂಡಿಸಿದ್ದಾರೆ.

**ಸಂಪತ್ತು–ಮಾನವ ಕಲ್ಯಾಣ**

ಸಂಪತ್ತಿನ ಉತ್ಪಾದನೆ ಇಲ್ಲದೇ ಆರ್ಥಿಕಾಭಿವೃದ್ಧಿ ತನ್ಮೂಲಕ ಸಮಾಜಿಕ ವಿಕಾಸ ಸಾಧ್ಯವಿಲ್ಲ. ಸಂಪತ್ತಿಗಾಗಿ ಸಂಪತ್ತನ್ನು ನಾವು ಉತ್ಪಾದಿಸುತ್ತಿಲ್ಲ. ಅದಕ್ಕು ಉದ್ದೇಶವೊಂದಿದೆ. ಮಾನವ ಕಲ್ಯಾಣ ನಮ್ಮ ಗುರಿ, ಸಂಪತ್ತು ಅದನ್ನು ಸಾಧಿಸುವ ಸಾಧನ ಎಂದು 19 ನೇ ಶತಮಾನದ ಆಂಗ್ಲ ಅರ್ಥಶಾಸ್ತ್ರಜ್ಞ ಅಲ್ರೈಡ್ ಮಾರ್ಶೆಲ್ ಹೇಳಿದ್ದಾರೆ. ಇದೇ ವಿಷಯವನ್ನು ಶರಣರು ಸುಮಾರು 800 ವರ್ಷಗಳ ಹಿಂದೆಯೇ ಪ್ರತಿಪಾದಿಸಿದ್ದಾರೆ.

ಮಾನವ ಕಲ್ಯಾಣದೊಂದಿಗೆ ಶಿವಾರ್ಥದ ಸಾಧನೆಗೂ ನಮ್ಮ ಸಂಪತ್ತು ಸಾಧನವಾಗಬೇಕೆಂದರು ಶರಣರು. ಶಿವಾರ್ಥದ ಗುರಿಯನ್ನು ಸಾಧಿಸದಿದ್ದಲ್ಲಿ ನಮ್ಮ ಸಂಪತ್ತಿಗೆ ಬೆಲೆ ಇಲ್ಲ. ನಮ್ಮ ಸಂಪತ್ತು ಐಹಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಸಾಧಕವಾಗಬೇಕೇ ವಿನಹ ಭಾದಕವಾಗಬಾರದೆಂದು ಶರಣರ ಬಯಕೆ.

**ಆರ್ಥಿಕ ಸಮತೆ :–**

ಆರ್ಥಿಕ ಸಮತೆ ಎಂಬುದು ಸಮಾಜವಾದದ ಲಕ್ಷಣಗಳಲ್ಲೊಂದು ಆರ್ಥಿಕ ಸಮತೆ ಎಂದರೇ ದೇಶದಲ್ಲಿ ಪ್ರತಿಯೊಬ್ಬರ ಆದಾಯವು ಸಮವಿದ್ದು ಒಂದೇ ವಿಧವಾದ ಜೀವನಮಟ್ಟ ಹೊಂದುವುದು ಎಂದಲ್ಲ ನೂರಕ್ಕೆ ನೂರರಷ್ಟು ಆರ್ಥಿಕ ಸಮತೆ ಎಂಬುದು ವಿಥ್ಯ ಕಲ್ಪನೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದ ಅಗತ್ಯಗಳನ್ನು ಪೂರೈಸುವ ಶಕ್ತಿಯನ್ನು ಹೊಂದಿದ್ದರೆ ಆಗ ದೇಶದಲ್ಲಿ ಆರ್ಥಿಕ ಸಮತೆ ಎಂಬ ಪದಕ್ಕೆ ಬೆಲೆ ಬರುತ್ತದೆ. ಆರ್ಥಿಕ ಸಮತೆಗಾಗಿ ಶರಣರು ಪ್ರತಿಪಾದಿಸಿದ ಅಂಶಗಳೆಂದರೆ:–

* ಪ್ರತಿಯೊಬ್ಬನಿಗೂ ಕಾಯಕದ ಅವಕಾಶ
* ಅರ್ಥ ಸಂಪಾದನೆಯಲ್ಲಿ ಪ್ರಾಮಾಣಿಕತೆ
* ಸಂಪತ್ತಿನ ನ್ಯಾಯಸಮ್ಮತ ವಿತರಣೆ
* ಸಂಪತ್ತಿನ ವಯಕ್ತಿಕ ಸಂಗ್ರಹಣೆ ಸಲ್ಲದು.
* ದಾನ

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಕಾಯಕದಿಂದಲೇ ಬದುಕ ಬೇಕೆಂಬುದು ಶರಣವಾದ ವ್ಯಕ್ತಿಯ ಕಾಯಕ ಸತ್ಯವೂ, ಶುದ್ದವೂ ಆಗಿರಬೇಕು.

" ಕಾರೆಯ ಸ್ವಪ್ಪಾದರೂ ಕಾಯಕದಿಂದ ಬಂದುದು
ಲಿಂಗಕ್ಕೆರ್ಪಿತವಲ್ಲದ ದುರಾಶೆಯಿಂದ ಬಂದುದು ಅನರ್ಪಿತ"
– ನುಲಿಯ ಚಂದಯ್ಯ

**ಉದಾರೀಕರಣ,ಜಾಗತೀಕರಣ ಹಾಗೂ ಖಾಸಗೀಕರಣ**

ಎಂಬ ತ್ರಿಕರಣಗಳ ಫಲವಾಗಿ. ಜನ್ಮ ತಾಳಿದ ನವಬಂಡವಾಳ ಶಾಹಿಯ ಕಹಿ ಅನುಭವವನ್ನು ಅನುಭವಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ನಿಂತು ಈಗ ಶರಣರ ಆರ್ಥಿಕ ಪರಿಕಲ್ಪನೆಗಳನ್ನು ಚಿಂತಿಸುವ ಕಾಲ ಬಂದಿದೆ. ನವ ಬಂಡವಾಳಶಾಹಿಯು ನಮ್ಮ ಪರಂಪರಾಗತ ವೃತ್ತಿಗಳನ್ನೆಲ್ಲ ವ್ಯಾಪಾರದ ಸರಕುಗಳನ್ನಾಗಿ ಬಳಸಿಕೊಂಡು ದೊಡ್ಡ ವರ್ಗಕಲಹಕ್ಕೆ ನಾಂದಿ ಹಾಡುತ್ತಿರುವ ಎಲ್ಲ ಸೂಚನೆಗಳು ಈಗ ಸ್ಪಷ್ಟವಾಗುತ್ತಿವೆ. ಮೂಲ ಕಾಯಕ ಜೀವಿಗಳು ತಮ್ಮ ವೃತ್ತಿಗಳನ್ನು ತೊರೆದು ಕೇವಲ ವೈಯಕ್ತಿಕ ಲಾಭ ತರುವ ಉದ್ಯೋಗಗಳತ್ತ ಸರಿಯುತ್ತಿದ್ದಾರೆ. ಇದರ ಲಾಭವನ್ನು ಬಂಡವಾಳ ಶಾಹಿಗಳು ದೋಚುತ್ತಿದ್ದಾರೆ.

ಅಂಬಿಗರ ಚೌಡಯ್ಯ ಯಾಂತ್ರೀಕೃತ ಡೋಣಗಳ ಮಾಲೀಕರ ಕೈಯಲ್ಲಿ ನಲುಗಿ ಹೋಗಿದ್ದಾನೆ.ಆಯ್ದಕ್ಕಿ ಮಾರಯ್ಯನಿಗೆ ಆಯಲು ಅಕ್ಕಿಯೇ ಇಲ್ಲ.ಕದಿರೆ ರೆಮ್ಮೆವ್ವೆಯ ಮಗ್ಗ–ಲಾಳಿ–ಕದಿರುಗಳು ಟೆಕ್ಸ್ಟೈಲ್ಸ್ ಇಂಡಸ್ಟ್ರೀಯ ಆಳದಲ್ಲಿ ಸಿಕ್ಕಿ ಹಾಕಿಕೊಂಡಿವೆ. ಡಕ್ಕೆಯ ಬೊಮ್ಮಣ್ಣನ ವಾದ್ಯವನ್ನು ಗುಡಿಗುಂಡಾರಗಳಲ್ಲಿ ಈಗ ಯಂತ್ರಗಳೇ ಬಾರಿಸುತ್ತಿವೆ. ತರುಗಾಹಿ ರಾಮಣ್ಣನ ಆಕಳು ಡೈರಿ ಉದ್ದಿಮೆಯಲ್ಲಿ ಬಂದಿತವಾಗಿದೆ. ಹಗ್ಗ ಹೊಸೆಯುತ್ತಿದ್ದ ನೂಲಿ ಚಂದಯನ ಕೈಗನ್ನು ಯಂತ್ರಗಳು ಉತ್ಪಾದಿಸಿ ಪ್ಲಾಸ್ಟಿಕ್ ಹಗ್ಗಗಳು ಕಟ್ಟಿ ಹಾಕಿವೆ. ಬಹುರೂಪಿ ಚೌಡಯ್ಯ ಹಾಗೂ ನಗೆಯ ಮಾರಿತಂದೆಗಳ ಸಹಜ ಮನರಂಜನಾ ವೃತ್ತಿಯನ್ನು, ಆಧುನಿಕ ದೃಶ್ಯ ಮಾದ್ಯಮಗಳು ನಗೆಗೀಡು ಮಾಡಿವೆ. ಮಡಿವಾಳ ಮಾಚಿದೇವ ಆಧುನಿಕ ಲಾಂಡ್ರಿ ಮತ್ತು ವಾಷಿಂಗ್ ಮಷಿನ್ಗಳಲ್ಲಿ ಕಣ್ಮರೆಯಾಗಿದ್ದಾನೆ. ಹರಳಯ್ಯ ನಂತವರು,ಕರೋನಾ,ಬಾಟಾ,ಲೂನಾರ್,ಲಿಬರ್ಟ ಮುಂತಾದ ಕಂಪನಿಗಳ ಕೈಯಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದಾರೆ. ಇಂತಹ ಎಷ್ಟೋ ವೃತಿ ಜೀವಿಗಳನ್ನು ಮತ್ತು ಅವರ ಪ್ರಾಮಾಣಿಕ ಕಾಯಕಗಳನ್ನು ನುಂಗಿ ಹಾಕಿರುವ ಬಹುರಾಷ್ಟ್ರೀಯ ಕಂಪನಿಗಳು ಇಡೀ ಅರ್ಥವ್ಯವಸ್ಥೆಯ ಅಡಿಗಲ್ಲನ್ನೇ ಬುಡಮೇಲು ಮಾಡುತ್ತಿವೆ. ಇಂದು ಹಣ ಮತ್ತು ಮೋಸದ ವ್ಯಾಪಾರವೇ ಪ್ರಧಾನವಾಗಿ, ವೃತ್ತಿಯಲ್ಲಿ ಮೊದಲಿದ್ದ ಗೌರವ ಮತ್ತು ಪ್ರಾಮಾಣಿಕತೆಗಳು ಕಣ್ಮರೆಯಾಗುತ್ತಿವೆ. ಒಟ್ಟಾರೆ ದುಡಿಮೆಯ ಆದಾಯ ಮತ್ತು ಆದಾಯದ ವಿಯೋಗ ಇವುಗಳ ನಡುವಿನ ತಾರ್ಕಿಕ ಸಂಬಂಧವೇ ಕಡಿದು ಹೋಗಿ, ಇಡೀ ಆರ್ಥಿಕ ಕ್ಷೇತ್ರ ಒಂದು ಬಗೆಯ ಅನೈತಿಕ ಒಪ್ಪಂದದ ಮೇಲೇಯೇ ಓಡುತ್ತಿದೆ.

ಹಣದ ಆದಾಯವೇ ಪರಮೋದ್ದೇಶವಾಗಿರುವ ವರ್ತಮಾನದ ಅರ್ಥವ್ಯವಸ್ಥೆಯಲ್ಲಿ ಸುಳ್ಳು, ವಂಚನೆ, ಭ್ರಷ್ಟ ಮಾರ್ಗಗಳೇ ಮೌಲ್ಯಗಳೆಂಬಂತೆ ಮೆರೆಯುತ್ತಿವೆ. ಇಂತಹ ಸಂದರ್ಭದಲ್ಲಿ 'ದುಡಿಮೆ' ಅಥವಾ 'ಕಾಯಕ' ಎಂಬ ತತ್ವಕ್ಕೆ ಶರಣರು ಕೊಟ್ಟ ಅರ್ಥ ಅದನ್ನವರು ಕ್ರಿಯಾ ರೂಪದಲ್ಲ ಬದುಕಿದ ರೀತಿ ಮತ್ತು ಆರ್ಥಿಕ ಮೌಲ್ಯವಾಗಿ ಅದನ್ನು ಪ್ರಯೋಗಿಸಿದ ಬಗೆ– ಇವೆಲ್ಲಾ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತವೆ. ಶರಣರ ಕಾಯಕ ತತ್ವ ಮಾತ್ರ ಅದಕ್ಕೊಂದು ಸೂಕ್ತ ಮಾರ್ಗದರ್ಶನ ಮಾಡಬಲ್ಲ ಶಕ್ತಿ ಹೊಂದಿಡೆ ಅಂದರೆ ಅತಿಶಯೋಕ್ತಿ ಅಲ್ಲ.

**ಆಕರ ಗ್ರಂಥಗಳು :–**

1) ಕಾಯಕ ದಾಸೋಹ. ಡಾ. ಬಸವರಾಜ ಸಾದರ
2) ವಶ್ವವಿಭೂತಿ ಬಸವಣ್ಣ– ಜಗದ್ಗುರು ಮಾತೇ ಮಹಾದೇವಿ
3) ಶರಣರ ಆರ್ಥಿಕ ಚಿಂತನೆಗಳು–ಬಿ.ಎ.ಪಾಟೀಲ
4) ಶಿವಶರಣರ ಕಾಯಕ ಸಿದ್ದಾಂತ–ಶ್ರೀ ಬಸವೇಶ್ವರ ಪೀಠ ಕನ್ನಡ ಅಧ್ಯಯನ ಪೀಠ
ಕ.ವಿ.ವಿ.ಧಾರವಾಡ

Certificate of Publication


# INTERNATIONAL JOURNAL OF CREATIVE RESEARCH THOUGHTS | ISSN: 2320 - 2882

*An International Open Access, Peer-reviewed, Refereed Journal*


M.G.V.C. Arts, Commerce & Science College, MUDDEBIHAL -586212 Dt. Vijayapur.

The Board of

International Journal of Creative Research Thoughts

Is hereby awarding this certificate to

**BASAVANTARAY GULI**

In recognition of the publication of the paper entitled

**BHAKTI NELEYALLI ARTHIK CHINTANEGALU**

Published In IJCRT ( www.ijcrt.org ) & 7.97 Impact Factor by Google Scholar

Volume 8 Issue 6 , Date of Publication:June 2020 2020-06-01 22:30:01

ISSN 2320-2882 IJCRT International Journal of Creative Research Thoughts(IJCRT)

EDITOR IN CHIEF

PAPER ID : IJCRT2006019

**Registration ID : 195253**


**Scholarly open access journals, Peer-reviewed, and Refereed Journals, Impact factor 7.97 (Calculate by google scholar and Semantic Scho | AI-Powered Research Tool) , Multidisciplinary, Monthly Journal**

**INTERNATIONAL JOURNAL OF CREATIVE RESEARCH THOUGHTS | IJCRT**

*An International Scholarly, Open Access, Multi-disciplinary, Indexed Journal*

**Website: www.ijcrt.org | Email id: editor@ijcrt.org | ESTD: 2013**

IJCRT | ISSN: 2320-2882 | IJCRT.ORG